**ದಿನಾಂಕಃ 19-08-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ಎಂ ಜಿ ಎಂ ವಕೀಲರಿಂದ**

ನಾನು ನಿಪಿ-10 ರಂತೆ ಹಾಜರು ಪಡಿಸಲಾದ ಔಷಧಿ. ಬಿಲ್ಲಿನಲ್ಲಿ ನಮೂದಿಸಲಾದ ಮೊತ್ತವನ್ನು ಆಸ್ಪತ್ರೆಗೆ ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-11 ಅದಕ್ಕೆ ಸಂಬಂಧಿಸಿದ ನಿಪಿ-165 ರವರೆಗೆ ಹಾಜರು ಪಡಿಸಿದ ಬಿಲ್ಲುಗಳ ಲಿಸ್ಟ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 12 ರಿಂದ 165 ರವೆರಗಿನ ಬಿಲ್ಲಗಳ ಮೇಲೆ ಡಿಸ್ಪೇನ್ಸಡ ಎಂದು ಶೀಲು ಹಾಕಲಾಗಿದೆ ಎಂದರೆ ಸರಿ. ನಾನು ಆ ಬಿಲ್ಲುಗಳಲ್ಲಿ ಹೇಳಿದ ಮೊತ್ತವನ್ನು ಆಸ್ಪತ್ರೆಗೆ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿ ಪಿ ಎಲ್ ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ಆ ಕಾರಣ ಆಸ್ಪತ್ರೆ ಖರ್ಚು ನನ್ನ ಕಡೆಯಿಂದ ವಸೂಲಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮುಂದಿನ ಚಿಕಿತ್ಸೆಗೆ ರೂ 5 ಲಕ್ಷ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಸುಮಾರು 10 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅ ದಿನ ನನಗೆ ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಆ ದಿನ ನಾನೇ ಲಾರಿಯ ಹಿಂಬದಿಗೆ ಡಿಕ್ಕಿ ಪಡಿಸಿದ್ದೇನೆ ಎಂದರೆ ಸರಿಯಲ್ಲ. ಐ ಎಂ ವಿ ವರದಿಯ ಪ್ರಕಾರ ನನ್ನ ವಾಹನ ಬಲಭಾಗಕ್ಕೆ ಯಾವುದೇ ಜಖಂ ಗಳು ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ಆ ವರದಿಯ ಪ್ರಕಾರ ನನ್ನ ಗಾಡಿಯ ಎಡಭಾಗಕ್ಕೆ ಜಖಂಗಳು ಆಗಿವೆ ಎಂದರೆ ಸರಿಯಲ್ಲ. ಆ ಲಾರಿಯ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ

ಹಾನಗಲ್